# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 71 (494) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಆಯುಷ್ ಆಸ್ಪತ್ರೆಗಳಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರುಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಸಂಪೂರ್ಣ ವರದಿಯನ್ನು ನೀಡುವುದು) | ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ 113 ತಜ್ಞ ವೈದ್ಯರು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ಜಿಲ್ಲಾವಾರು ಸಂಪೂರ್ಣ ವರದಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಸರ್ಕಾರವು ಖಾಯಂ ಹುದ್ದೆಗಳನ್ನು ಸೃಜನೆ ಮಾಡಿ ತಜ್ಞವೈದ್ಯರುಗಳನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಲು ಸಾಧ್ಯವಾಗದಿರಲು ಕಾರಣವೇನು | ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯು ತಾತ್ಕಾಲಿಕ ಯೋಜನೆಯಾಗಿದ್ದು, ಈ ಹುದ್ದೆಗಳು ಯೋಜನೆಯು ಚಾಲ್ತಿಯಲ್ಲಿರುವವರೆಗೆ ಮಾತ್ರ ಇರುತ್ತವೆ. ತಜ್ಞ ವೈದ್ಯರ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಯಾಗಿರುತ್ತವೆ. ಸದರಿ ಯೋಜನೆಯು ಅಸ್ತಿತ್ವದಲ್ಲಿರುವವರೆಗೂ ಮಾತ್ರ ಈ ಹುದ್ದೆಗಳು ಚಾಲ್ತಿಯಲಿರುತ್ತದೆ.<br><br>ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರ, ಅರೆ ವೈದ್ಯಕೀಯ ಹಾಗೂ ಇತರೆ ಸಿಬ್ಬಂದಿಗಳ ಸೇವೆಯನ್ನು ಖಾಯಂಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. |

| | | |
|---|---|---|
| ಇ) | ಕಳೆದ 10 ವರ್ಷಗಳಿಂದ ಸರ್ಕಾರಿ ತಾಲ್ಲೂಕು ಮತ್ತು ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರು ಅರೆವೈದ್ಯಕೀಯ ಮತ್ತು ಇತ್ಯಾದಿ ಹುದ್ದೆಗಳ ನೌಕರರನ್ನು ಖಾಯಂಗೊಳಿಸಲು ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆಯೇ; | ಇಲ್ಲ |
| ಈ) | ಆಯುಷ್ ತಜ್ಞ ವೈದ್ಯರುಗಳ ವಯೋಮಿತಿ ಮೀರುತ್ತಿದ್ದು, ಇವರುಗಳ ಕುಟುಂಬಕ್ಕೆ ಭದ್ರತೆ ನೀಡುವ ಹಿತದೃಷ್ಟಿಯಿಂದ ವೈದ್ಯರುಗಳ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ಸದರಿ ವೈದ್ಯರುಗಳನ್ನು ಸರ್ಕಾರಿ ಸೇವೆಯಲ್ಲಿ ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೆ, ಆಯುಷ್ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಪದ್ಧತಿಯ ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವಾಗ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಿ, ಇವರುಗಳಿಗೆ ಕೃಪಾಂಕ/ವಯೋಮಿತಿ ಸಡಿಲಿಕೆಯ ಅವಕಾಶ ಕಲ್ಪಿಸಲಾಗಿರುತ್ತದೆ. |

**ಸಂಖ್ಯೆ: ಆಕುಕ 141 ಪಿಐಎಂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 71(494)

## ಅನುಬಂಧ

| ಕ್ರ. ಸಂ | ಜಿಲ್ಲೆಯಹೆಸರು | ನ್ಯಾಮ್ ಯೋಜನೆಯಡಿ ತಾತ್ಕಾಲಿಕಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರ ಸಂಖ್ಯೆ |
|---|---|---|
| 1 | ಬಾಗಲಕೋಟೆ | 2 |
| 2 | ಬಳ್ಳಾರಿ | 4 |
| 3 | ಬೆಳಗಾವಿ | 9 |
| 4 | ಬೆಂಗಳೂರುಗ್ರಾಮಾಂತರ | 2 |
| 5 | ಬೀದರ್ | 3 |
| 6 | ಚಾಮರಾಜನಗರ | 3 |
| 7 | ಚಿಕ್ಕಬಳ್ಳಾಪುರ | 2 |
| 8 | ಚಿಕ್ಕಮಗಳೂರು | 6 |
| 9 | ಚಿತ್ರದುರ್ಗ | 5 |
| 10 | ದಕ್ಷಿಣಕನ್ನಡ | 2 |
| 11 | ದಾವಣಗೆರೆ | 1 |
| 12 | ಧಾರವಾಡ | 0 |
| 13 | ಗದಗ | 4 |
| 14 | ಹಾಸನ | 8 |
| 15 | ಹಾವೇರಿ | 4 |
| 16 | ಕಲ್ಬುರ್ಗಿ | 0 |
| 17 | ಕೊಡಗು | 6 |
| 18 | ಕೋಲಾರ | 2 |
| 19 | ಕೊಪ್ಪಳ | 7 |
| 20 | ಮಂಡ್ಯ | 9 |
| 21 | ಮೈಸೂರು | 4 |
| 22 | ರಾಯಚೂರು | 8 |
| 24 | ರಾಮನಗರ | 2 |
| 25 | ತುಮಕೂರು | 2 |
| 26 | ಉಡುಪಿ | 3 |
| 27 | ಉತ್ತರಕನ್ನಡ | 7 |
| 28 | ವಿಜಯನಗರ | 3 |
| 29 | ವಿಜಯಪುರ | 2 |
| 30 | ಯಾದಗಿರಿ | 3 |
|  | **ಒಟ್ಟು** | **113** |